# ಸುದ್ದಿಸಂಚಯ

## ಕಡಪ ರಾಮಕೃಷ್ಣ ಮಿಷನ್ನಿನಲ್ಲಿ ವಿದ್ಯಾರ್ಥಿ ನಿಲಯದ ಉದ್ಘಾಟನೆ

ದಿನಾಂಕ ೧೦.೦೩.೨೦೦೮ ರಂದು ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತ್ ಸ್ವಾಮಿ ಪ್ರಭಾನಂದಜಿ ಮಹಾರಾಜ್ ಅವರು ಆಂಧ್ರಪ್ರದೇಶದ ಕಡಪ ಕೇಂದ್ರದಲ್ಲಿನ 'ಶ್ರೀರಾಮಕೃಷ್ಣ ಬಾಲಕಾಶ್ರಮ' ಎಂಬ ಹೆಸರಿನ ವಿದ್ಯಾರ್ಥಿ ನಿಲಯದ ನೂತನ ಕಟ್ಟಡವನ್ನು ಉದ್ಘಾಟಿಸಿದರು. ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಗೌತಮಾನಂದಜಿ ಅವರು ಅಧ್ಯಕ್ಷತೆ ವಹಿಸಿದ್ದರು. ಈ ಬಾಲಕಾಶ್ರಮವು, ಗ್ರಾಮೀಣ ಪ್ರದೇಶಕ್ಕೆ ಸೇರಿದ ಆರ್ಥಿಕವಾಗಿ ಹಿಂದುಳಿದ ಪ್ರತಿಭಾಶಾಲೀ ಬಾಲಕರಿಗೆ ಉಚಿತವಾಗಿ ಪ್ರೌಢಶಾಲೆಯ ವಿದ್ಯಾಭ್ಯಾಸವನ್ನು ನೀಡುವ ಉದ್ದೇಶವನ್ನು ಹೊಂದಿದೆ. ಹಾಗೂ, ೨೫.೦೨.೨೦೦೮ ರಂದು ಗ್ರಾಮೀಣ ಯುವಕರಿಗೆ ತೋಟಗಾರಿಕೆಯ ವಿಷಯದಲ್ಲಿ ತರಬೇತಿ ಕಾರ್ಯಕ್ರಮವನ್ನು ಏಳು ದಿನಗಳ ಕಾಲ ಆಶ್ರಮದಲ್ಲಿ ಹಮ್ಮಿಕೊಳ್ಳಲಾಗಿತ್ತು. ಇದಲ್ಲದೆ, ಆಶ್ರಮದ ವಾರ್ಷಿಕೋತ್ಸವ ಸಮಾರಂಭಗಳ ಅಂಗವಾಗಿ, ಮಾರ್ಚ್ ೧೩ ರಿಂದ ನಾಲ್ಕು ದಿನಗಳ ಕಾಲ ಪುರುಷರಿಗಾಗಿ ಆವಾಸೀ ಆಧ್ಯಾತ್ಮಿಕ ಶಿಬಿರವನ್ನೂ ನಡೆಸಲಾಯಿತು.



ಎಡದಿಂದ, ಶ್ರೀ ರಮಣ ರೆಡ್ಡಿ, ಸ್ವಾಮಿ ಗೌತಮಾನಂದಜಿ, ಸ್ವಾಮಿ ಪ್ರಭಾನಂದಜಿ, ಸ್ವಾಮಿ ಆತ್ಮವಿದಾನಂದಜಿ

## ಕನ್ನಡನಾಡಿನಲ್ಲಿ ರಾಮಕೃಷ್ಣ ಸಂಘದ ಮುನ್ನಡೆ

**ಬೆಂಗಳೂರು ರಾಮಕೃಷ್ಣ ಮಠದಲ್ಲಿ** ಶಿವರಾತ್ರಿ ಪೂಜೆಯು ದಿನಾಂಕ ೦೬.೦೩.೨೦೦೮ ರಂದು ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಸುಮಾರು ೨,೨೦೦ ಕ್ಕೂ ಹೆಚ್ಚು ಭಕ್ತರು ಭಾಗವಹಿಸಿದ್ದರು. ತಾರೀಖು ೦೯.೦೩.೨೦೦೮ ರಂದು ಜರುಗಿದ ಶ್ರೀರಾಮಕೃಷ್ಣ ಜಯಂತಿಯಂದು ಸುಮಾರು ಬೆಳಗಿನ ಪೂಜೆಗೆ ೪,೨೦೦ ಭಕ್ತರು ಮತ್ತು ಸಂಜೆಯ ಕಾರ್ಯಕ್ರಮಕ್ಕೆ ಸುಮಾರು ೨೦೦೦ ಭಕ್ತರು ಪಾಲ್ಗೊಂಡಿದ್ದರು. ಪರಮಪೂಜ್ಯ ಸ್ವಾಮಿ ಹರ್ಷಾನಂದಜಿ ಮಹಾರಾಜರ **"ಸಂಕ್ಷಿಪ್ತ ಹಿಂದೂ ವಿಶ್ವಕೋಶ"** ಕ್ಕೆ ಒಳ್ಳೆಯ ಬೇಡಿಕೆ ಬರುತ್ತಿದ್ದು, ಮೇ ತಿಂಗಳ ಕೊನೆಯ ವಾರದಲ್ಲಿ ಪುಸ್ತಕದ ಬಿಡುಗಡೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

**ರಾಮಕೃಷ್ಣ ಮಠ, ಹಲಸೂರು,** ಬೆಂಗಳೂರು ವತಿಯಿಂದ ಮಾರ್ಚ್ ೨೦೦೮ರಲ್ಲಿ ನಡೆಸಿದ ಕೆಲವು ಕಾರ್ಯಕ್ರಮಗಳು: ೧. **ಆರೋಗ್ಯ ಶಿಬಿರ:** ಸರಕಾರೀ ಪ್ರಾಥಮಿಕ ಶಾಲೆ, ಚನ್ನಸಂದ್ರ, ಬೆಂಗಳೂರು ಇಲ್ಲಿನ ಸುಮಾರು ೨೫೦ ವಿದ್ಯಾರ್ಥಿಗಳಿಗೆ ಉಚಿತ ವೈದ್ಯಕೀಯ ಚಿಕಿತ್ಸೆ, ದಂತ ಚಿಕಿತ್ಸೆ ಮತ್ತು ಉತ್ತಮ ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆ ಸಲಹೆ ನೀಡಲಾಯಿತು. ಮಕ್ಕಳಿಗೆ ಟೂತ್ ಪೇಸ್ಟ್‌ಗಳನ್ನು ವಿತರಿಸಲಾಯಿತು. ೨. **ಆಧ್ಯಾತ್ಮಿಕ ಶಿಬಿರ :** ಮಾರ್ಚ್ ೧೬ ರಂದು ನಡೆದ ಆಧ್ಯಾತ್ಮಿಕ ಶಿಬಿರದಲ್ಲಿ ೧೪೦ ಭಕ್ತರು ಭಾಗವಹಿಸಿದ್ದರು. ಮೈಸೂರು ರಾಮಕೃಷ್ಣ ಆಶ್ರಮದ ಸ್ವಾಮಿ ಈಶಪ್ರೇಮಾನಂದಜಿ ಮತ್ತು ಸ್ವಾಮಿ ಭಗವದಾನಂದಜಿ ಶಿಬಿರವನ್ನು ನಡೆಸಿಕೊಟ್ಟರು.

**ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ** ವಾರ್ಷಿಕೋತ್ಸವ ಕಾರ್ಯಕ್ರಮಗಳು ದಿನಾಂಕ ೧೦.೩.೨೦೦೮ ರಿಂದ ೧೬.೩.೨೦೦೮ ರವರೆಗೆ ನಡೆದವು. ಸ್ವಾಮಿ ಸುಖಾತ್ಮಾನಂದಜಿ, ಸ್ವಾಮಿ ಹೃದಾನಂದಜಿ , ಸ್ವಾಮಿ ಅನುಪಮಾನಂದಜಿ, ಬೇಲಿ ಮಠದ ಪೂಜ್ಯ ಶ್ರೀ ಶಿವಾನುಭವ ಚರಮೂರ್ತಿ ಶಿವರುದ್ರ ಮಹಾಸ್ವಾಮಿಗಳು, ಡಾ. ಪದ್ಮ, ಡಾ. ಹೆಚ್.ವಿ. ನಾಗರಾಜ ರಾವ್, ಡಾ. ಅನಂತರಾಮು, ಶ್ರೀ ಎಸ್. ಎಸ್. ರಮೇಶ ಮುಂತಾದ ಗಣ್ಯರು ವಿವಿಧ ವಿಷಯಗಳ ಬಗ್ಗೆ ಪ್ರವಚನಗಳನ್ನು ನೀಡಿದರು. ಕುಮಾರಿ ಶ್ವೇತಾ ಮತ್ತು ಶ್ರೀ ಸಚ್ಚಿದಾನಂದ ವಿಠಲದಾಸ – ಅವರಿಂದ ಭಜನೆ, ಶ್ರೀ ವಿಜಯರಾಘವನ್ ಅವರಿಂದ ಹಾಡುಗಾರಿಕೆ ಮತ್ತು ಶ್ರೀ ರವಿಶಂಕರ ಮಿಶ್ರ ಅವರಿಂದ ಬಾನ್ಸುರಿ ವಾದನಗಳನ್ನು ಏರ್ಪಡಿಸಲಾಗಿತ್ತು. ಈ ಎಲ್ಲ ಕಾರ್ಯಕ್ರಮಗಳಲ್ಲಿಯೂ ಬಹು ಸಂಖ್ಯೆಯಲ್ಲಿ ಭಕ್ತರು ಮತ್ತು ಹಿತೈಷಿಗಳು ಭಾಗವಹಿಸಿದ್ದರು.

**ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ** ವತಿಯಿಂದ ಮಾರ್ಚ್ ೩೧ ನೇ ತಾರೀಖು ಸಂಜೆ ನಗರದ ಗೋಕುಲಂ ೪ನೇ ಹಂತದಲ್ಲಿರುವ ಕೊಳಚೆ ನಿವಾಸಿಗಳ ಪ್ರದೇಶದಲ್ಲಿ ವಿಶೇಷ ಸತ್ಸಂಗವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜೀ ಮತ್ತು ರಾಮಕೃಷ್ಣ ವಿದ್ಯಾಶಾಲೆಯ ಮುಖ್ಯಸ್ಥರಾದ ಸ್ವಾಮಿ ಮುಕ್ತಿದಾನಂದಜೀ ಪಾಲ್ಗೊಂಡರು. ಸ್ವಾಮೀಜಿಯವರಿಗೆ ನಿವಾಸಿಗಳು ಮಂಗಳಾರತಿ ಬೆಳಗಿ ಬರಮಾಡಿಕೊಂಡರು. ಭಜನೆ ಮತ್ತು ಆಶೀರ್ವಚನಗಳು ನಡೆದವು. ಸತ್ಸಂಗವನ್ನು ಆಶ್ರಮದ ಭಕ್ತರಾದ ಸ್ವಾಮಿಲಿಂಗಪ್ಪ ಹಾಗೂ ಶ್ರೀ ಸೋಮಶೇಖರ್‌ರವರು ಸಂಘಟಿಸಿದ್ದರು. ದಿನಾಂಕ ೦೪.೦೪.೨೦೦೮ ರಂದು ಇದೇ ಪ್ರದೇಶದಲ್ಲಿ **ಜ್ಞಾನವಾಹಿನಿ ಕಾರ್ಯಕ್ರಮವನ್ನು** ಯಶಸ್ವಿಯಾಗಿ ನಡೆಸಲಾಯಿತು. ಸ್ಥಳೀಯ ಜನರು ಆರತಿಯೆತ್ತಿ ಸ್ವಾಮಿ ವಿವೇಕಾನಂದರ ಪ್ರತಿಮೆಯನ್ನು ಬರಮಾಡಿಕೊಂಡರು. ಮೆರವಣಿಗೆ, ಭಜನೆ, ಪ್ರವಚನ ಮತ್ತು ಚಲನಚಿತ್ರ ಪ್ರದರ್ಶನಗಳು ಆಯೋಜಿತವಾಗಿದ್ದವು.

**ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮವು 'ವಸಂತ ವಿಹಾರ'** ಎಂಬ ಹೆಸರಿನ ಬಾಲಕರಿಗಾಗಿನ ವ್ಯಕ್ತಿತ್ವ ನಿರ್ಮಾಣ ಶಿಬಿರವನ್ನು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ, ಏಪ್ರಿಲ್ ೧೧ ರಿಂದ ಮೇ ೧ ರವರೆಗೆ ಮತ್ತು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಮೇ ೨ ರಿಂದ ಮೇ ೧೩ ರವರೆಗೆ ಹಮ್ಮಿಕೊಂಡಿದೆ.

**ಮಂಗಳೂರು ರಾಮಕೃಷ್ಣ ಮಠದಲ್ಲಿ** ಶ್ರೀರಾಮಕೃಷ್ಣ ಜಯಂತಿಯನ್ನು ದಿನಾಂಕ ೦೯.೦೩.೨೦೦೮ ರಂದು ಆಚರಿಸಲಾಯಿತು. ಸುಮಾರು ೪೦೦ ಜನ ಭಕ್ತರು ಪಾಲ್ಗೊಂಡಿದ್ದರು.

Managing Editor : *Swami Nityasthananda* Editor *Swami Vireshananda*

Printed by Sri J B. Pattabhi and Published by Swami Nityasthananda, on behalf of Sri Ramakrishna Ashrama, Yadavagiri, Mysore and Printed at Pattabi Enterprises, Ramavilasa Road, Mysore and published at Sri Ramakrishna Ashrama, Yadavagiri, Mysore.